KACD410001692024

**ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 6 ನೇ ಏಪ್ರಿಲ್, 2026**

**ಸಿ.ಸಿ. ಸಂಖ್ಯೆ-39/2024**

ಫಿರ್ಯಾದಿ : ರಾಜ್ಯದ ಪರವಾಗಿ, ಹೊಳಲ್ಕೆರೆ ಪೊಲೀಸ್ ಠಾಣೆ.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

ಆರೋಪಿತರು:

1. ನಾಗರಾಜ ಬಿನ್ ಬಸಪ್ಪ,
   ವಯಸ್ಸುಃ ಸುಮಾರು 34 ವರ್ಷ,
   ಉದ್ಯೋಗಃ ವ್ಯವಸಾಯಗಾರರು,
2. ಬಸಪ್ಪ ಬಿನ್ ಕರಿಯಪ್ಪ,
   ವಯಸ್ಸು ಸುಮಾರು 73 ವರ್ಷ,
   ಉದ್ಯೋಗಃ ವ್ಯವಸಾಯಗಾರರು,
3. ಸವಿತ ಕೋಂ ನಾಗರಾಜ,
   ವಯಸ್ಸು ಸುಮಾರು 25 ವರ್ಷ,
   ಉದ್ಯೋಗಃ ಮನೆಗೆಲಸ,

4. ಕರಿಯಪ್ಪ ಬಿನ್ ಕರಿಯಪ್ಪ,
ವಯಸ್ಸು ಸುಮಾರು 41 ವರ್ಷ,
ಉದ್ಯೋಗಃ ವ್ಯವಸಾಯಗಾರರು,

5. ನಿಂಗಪ್ಪ ಬಿನ್ ಬಸಪ್ಪ,
ವಯಸ್ಸು ಸುಮಾರು 33 ವರ್ಷ,
ಉದ್ಯೋಗಃ ವ್ಯವಸಾಯಗಾರರು,

6. ಮಂಜುನಾಥ ಬಿನ್ ಕರಿಯಪ್ಪ,
ವಯಸ್ಸು ಸುಮಾರು 33 ವರ್ಷ,
ಉದ್ಯೋಗಃ ವ್ಯವಸಾಯಗಾರರು,

7. ಗೋಪಾಲ ಬಿನ್ ತಿಪ್ಪಣ್ಣ,
ವಯಸ್ಸು ಸುಮಾರು 33 ವರ್ಷ,
ಉದ್ಯೋಗಃ ವ್ಯವಸಾಯಗಾರರು,

8. ತಿಮ್ಮಣ್ಣ ಬಿನ್ ಕರಿಯಪ್ಪ,
ವಯಸ್ಸು ಸುಮಾರು 48 ವರ್ಷ,
ಉದ್ಯೋಗಃ ವ್ಯವಸಾಯಗಾರರು,

9. ಹರೀಶ ಬಿನ್ ತಿಮ್ಮಪ್ಪ,
ವಯಸ್ಸು ಸುಮಾರು 32 ವರ್ಷ,
ಉದ್ಯೋಗಃ ವ್ಯವಸಾಯಗಾರರು,

ಎಲ್ಲರ ವಾಸಃ ದುಮ್ಮಿ ಗೊಲ್ಲರಹಟ್ಟಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ.

(ಪ್ರತಿನಿಧಿಸುವವರುಃ ಶ್ರೀ ಬಿ.ಎನ್. ಪ್ರಶಾಂತ ಕುಮಾರ್, ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 14.06.2023 |
| 2 | ಅಪರಾಧ ವರದಿಯಾದ ದಿನಾಂಕ | 14.06.2023 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | – |
| 4 | ಫಿರ್ಯಾದಿಯ ಹೆಸರು | ಕರಿಯಪ್ಪ |

| | | |
|---|---|---|
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 26.03.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 26.03.2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ 143, 147, 504, 323, 324, 354(ಬಿ) ಮತ್ತು 506 ಸಹವಾಚಕ ಕಲಂ 149 |
| 8 | ನ್ಯಾಯಾಧೀಶರ ಅಭಿಪ್ರಾಯ | 1 ರಿಂದ 9 ನೇ ಆರೋಪಿತರು ನಿರಪರಾಧಿಗಳು |

* * * * *

## <u>ತೀರ್ಪು</u>

1 ರಿಂದ 9 ನೇ ಆರೋಪಿತರ ವಿರುದ್ಧ ಪೊಲೀಸ್ ಉಪ ನಿರೀಕ್ಷಕರು, ಹೊಳಲ್ಕೆರೆ ಪೊಲೀಸ್ ಠಾಣೆ, ಹೊಳಲ್ಕೆರೆರವರು ದೋಷಾರೋಪಣೆ ಪತ್ರವನ್ನು ಸಲ್ಲಿಸಿ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 143, 147, 504, 323, 324, 354(ಬಿ) ಮತ್ತು 506 ಸಹವಾಚಕ ಕಲಂ 149 ರ ಅಪರಾಧಗಳ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-

ದಿನಾಂಕ 14.06.2023 ರಂದು ಬೆಳಿಗ್ಗೆ 08.30 ಗಂಟೆ ಸಮಯದಲ್ಲಿ, ಚಾಸಾ-1, 4, 5, 8 ರಿಂದ 10 ರವರು ಹೊಳಲ್ಕೆರೆ ಪೋಲೀಸ್ ಠಾಣಾ ವ್ಯಾಪ್ತಿ, ದುಮ್ಮಿ ಗೊಲ್ಲರಹಟ್ಟಿ ಗ್ರಾಮದಲ್ಲಿ, ಚಾಸಾ-1 ರವರಿಗೆ ಸಂಬಂಧಿಸಿದ ಖಾಲಿ ಜಾಗದಲ್ಲಿ ಕುರಿ ಶೆಡ್ ನಿರ್ಮಾಣ ಮಾಡುತ್ತಿದ್ದ ಸಮಯದಲ್ಲಿ, 1 ರಿಂದ 4 ನೇ ಆರೋಪಿತರು ಚಾಸಾ-1, 4, 5, 8 ರಿಂದ 10 ರವರ ಬಳಿಗೆ ಬಂದು, ಏಕಾಏಕಿ ಸೂಳೆ ಮಕ್ಕಳ, ಬೋಳಿ ಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, 1 ನೇ ಆರೋಪಿತರು ಕೋಲಿನಿಂದ ಚಾಸಾ-1 ರವರ ಮೈಕೈಗೆ ಹೊಡೆದಿದ್ದು, 4 ನೇ ಆರೋಪಿತರು ಕಣಿಗೆಯಿಂದ ಚಾಸಾ-5 ರವರ ಹಣೆಗೆ ಹೊಡೆದು ನೋವುಂಟುಪಡಿಸಿದ್ದು, 2 ಮತ್ತು 3 ನೇ ಆರೋಪಿತರು ಚಾಸಾ-4 ರವರಿಗೆ ಹೊಡೆದಿದ್ದು, ನಂತರ 5 ರಿಂದ 9 ನೇ ಆರೋಪಿತರು ಬಂದು ಎಲ್ಲರೂ ಗುಂಪು

ಸೇರಿಕೊಂಡು ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ, ಎಲ್ಲರಿಗೂ ಕೈಕಾಲುಗಳಿಂದ ಮೈಕೈಗೆ ಹೊಡೆದಿದ್ದು, ನಂತರ ಗಲಾಟೆಯನ್ನು ಬಿಡಿಸಿಕೊಳ್ಳಲು ಬಂದ ಚಾಸಾ-6, 7 ರವರ ಮೇಲೆ ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಿದ್ದು, 1 ನೇ ಆರೋಪಿತರು ಚಾಸಾ-6 ರವರ ಸೀರೆಯನ್ನು ಹಿಡಿದು ಎಳೆದಾಡಿ, ಮಾನಕ್ಕೆ ಚ್ಯುತಿಯುಂಟುಮಾಡಿದ್ದು, 4 ನೇ ಆರೋಪಿತರು ಚಾಸಾ-7 ರವರ ಮೈಕೈಗೆ ಹೊಡೆದಿದ್ದು, ನಂತರ ಬಿಡಿಸಲು ಬಂದ ಚಾಸಾ-8 ಮತ್ತು 10 ರವರಿಗೆ ಕೈಕಾಲುಗಳಿಂದ ಹೊಡೆದಿದ್ದು, ಎಲ್ಲಾ ಆರೋಪಿತರು ಸೇರಿಕೊಂಡು ಚಾಸಾ-1, 4 ರಿಂದ 10 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಚಾಸಾ-1, 4 ರಿಂದ 10 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟು ಮಾಡಿರುತ್ತಾರೆಂದು ಆರೋಪಿಸಲಾಗಿದೆ.

3. 1 ರಿಂದ 9 ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಆರೋಪಣಾ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಯಿತು. 1 ರಿಂದ 9 ನೇ ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, 1 ರಿಂದ 9 ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ 1 ರಿಂದ 9 ನೇ ಆರೋಪಿತರ ವಿರುದ್ಧ ಆಪಾದನೆಯನ್ನು ರಚಿಸಿ, ಅವರಿಗೆ ಓದಿ ಹೇಳಿ ವಿವರಿಸಲಾಗಿ, 1 ರಿಂದ 9 ನೇ ಆರೋಪಿತರು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. 1 ರಿಂದ 9 ನೇ ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತು ಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 15 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾ.ಸಾ-1 ಎಂದು, ಗಾಯಾಳು ಸಾಕ್ಷಿದಾರರಾದ ಚಾಸಾ-4 ರಿಂದ 10 ರವರನ್ನು ಪ್ರಾ.ಸಾ-2 ರಿಂದ 8 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2, 3, 11 ರಿಂದ 15 ರವರನ್ನು ಸಾಕ್ಷ್ಯದ ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ಮತ್ತು 8 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ.

5. 1 ರಿಂದ 9 ನೇ ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಂತಹ ಯಾವುದೇ ಮೌಖಿಕ ಹಾಗೂ ದಾಖಲೆಗಳ ಸಾಕ್ಷಾಧಾರಗಳು ಈ ಪ್ರಕರಣದಲ್ಲಿ ಕಂಡುಬರದಿದ್ದ ಕಾರಣ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ 1 ರಿಂದ 9 ನೇ ಆರೋಪಿತರ ವಿರುದ್ಧ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸುವ ಹಂತವನ್ನು ಕೈಬಿಡಲಾಗಿದೆ.

6. 1 ರಿಂದ 9 ನೇ ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

7. ಉಭಯ ಪಕ್ಷಗಳ ವಾದ-ವಿವಾದಗಳನ್ನು ಆಲಿಸಲಾಯಿತು. ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

8. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆಃ-

1. ದಿನಾಂಕ 14.06.2023 ರಂದು ಬೆಳಿಗ್ಗೆ 08.30 ಗಂಟೆ ಸಮಯದಲ್ಲಿ, ಚಾಸಾ-1, 4, 5, 8 ರಿಂದ 10 ರವರು ಹೊಳಲ್ಕೆರೆ ಪೋಲೀಸ್ ಠಾಣಾ ವ್ಯಾಪ್ತಿ, ದುಮ್ಮಿ ಗೊಲ್ಲರಹಟ್ಟಿ ಗ್ರಾಮದಲ್ಲಿ, ಚಾಸಾ-1 ರವರಿಗೆ ಸಂಬಂಧಿಸಿದ ಖಾಲಿ ಜಾಗದಲ್ಲಿ ಕುರಿ ಶೆಡ್ ನಿರ್ಮಾಣ ಮಾಡುತ್ತಿದ್ದ ಸಮಯದಲ್ಲಿ, 1 ರಿಂದ 9 ನೇ ಆರೋಪಿತರು ಚಾಸಾ-1, 4, 5, 8 ರಿಂದ 10 ರವರ ಮೇಲೆ ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುವ ಕಾರಣ, 1 ರಿಂದ 9 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?
2. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 9 ನೇ ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು, ಚಾಸಾ-1, 4, 5,

8 ರಿಂದ 10 ರವರ ಮೇಲೆ ದೊಂಬಿ ನಡೆಸಿರುವ ಕಾರಣ, 1 ರಿಂದ 9 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

3. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರು ಚಾಸಾ-1, 4, 5, 8 ರಿಂದ 10 ರವರ ಬಳಿಗೆ ಬಂದು ಏಕಾಏಕಿ ಸೂಳೆ ಮಕ್ಕಳ, ಬೋಳಿ ಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ನಂತರ 5 ರಿಂದ 9 ನೇ ಆರೋಪಿತರು ಬಂದು ಚಾಸಾ-1, 4, 5, 8 ರಿಂದ 10 ರವರಿಗೆ ಮತ್ತು ಗಲಾಟೆಯನ್ನು ಬಿಡಿಸಿಕೊಳ್ಳಲು ಬಂದ ಚಾಸಾ-6 ಮತ್ತು 7 ರವರ ಮೇಲೆ ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಾಡಿರುವ ಕಾರಣ, 1 ರಿಂದ 9 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

4. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 2 ಮತ್ತು 3 ನೇ ಆರೋಪಿತರು ಚಾಸಾ-4 ರವರಿಗೆ ಹೊಡೆದಿದ್ದು, 5 ರಿಂದ 9 ನೇ ಆರೋಪಿತರು ಚಾಸಾ-1, 4, 5, 8 ರಿಂದ 10 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದಿದ್ದು, 4 ನೇ ಆರೋಪಿತರು ಚಾಸಾ-7 ರವರ ಮೈಕೈಗೆ ಹೊಡೆದಿದ್ದು, ನಂತರ ಬಿಡಿಸಲು ಬಂದ ಚಾಸಾ-8 ಮತ್ತು 10 ರವರಿಗೂ ಕೈಕಾಲುಗಳಿಂದ ಹೊಡೆದಿದ್ದು, ಚಾಸಾ-1, 4 ರಿಂದ 10 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟುಮಾಡಿರುವ ಕಾರಣ, 2 ರಿಂದ 9 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323

ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

5. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ನೇ ಆರೋಪಿತರು ಕೋಲಿನಿಂದ ಚಾಸಾ-1 ರವರ ಮೈಕೈಗೆ ಹೊಡೆದಿದ್ದು, 4 ನೇ ಆರೋಪಿತರು ಕಣಿಗೆಯಿಂದ ಚಾಸಾ-5 ರವರ ಹಣೆಗೆ ಹೊಡೆದು ನೋವುಂಟುಪಡಿಸಿದ್ದು, ಚಾಸಾ-1 ಮತ್ತು 5 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟು ಮಾಡಿರುವ ಕಾರಣ, 1 ಮತ್ತು 4 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

6. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ನೇ ಆರೋಪಿತರು ಚಾಸಾ-6 ರವರ ಸೀರೆಯನ್ನು ಹಿಡಿದು ಎಳೆದಾಡಿದ್ದು, ಚಾಸಾ-6 ರವರ ಮಾನಕ್ಕೆ ಚ್ಯುತಿಯನ್ನುಂಟು ಮಾಡಿರುವ ಕಾರಣ, 1 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

7. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 9 ನೇ ಆರೋಪಿತರು ಚಾಸಾ-1, 4 ರಿಂದ 10 ರವರಿಗೆ ಕೊಲೆ ಬೆದರಿಕೆ ಹಾಕಿರುವ ಕಾರಣ, 1 ರಿಂದ 9 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು

ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿ ದ್ದಾರೆಯೇ ?

8. ಹಾಗಿದ್ದರೆ ಯಾವ ಆಜ್ಞೆ ?

9. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ-

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ, |
| ಅಂಶ-2 | : | ನಕಾರಾತ್ಮಕವಾಗಿ, |
| ಅಂಶ-3 | : | ನಕಾರಾತ್ಮಕವಾಗಿ, |
| ಅಂಶ-4 | : | ನಕಾರಾತ್ಮಕವಾಗಿ, |
| ಅಂಶ-5 | : | ನಕಾರಾತ್ಮಕವಾಗಿ, |
| ಅಂಶ-6 | : | ನಕಾರಾತ್ಮಕವಾಗಿ, |
| ಅಂಶ-7 | : | ನಕಾರಾತ್ಮಕವಾಗಿ, |
| ಅಂಶ-8 | : | ಅಂತಿಮ ಆದೇಶದಂತೆ. |

## ಕಾ ರ ಣ ಗ ಳು

**10. ಅಂಶ-1 ರಿಂದ 8:-** ಈ ಏಳು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ಹಾಗೂ ಈ ಅಂಶಗಳಿಗೆ ನೀಡುವಂತಹ ಕಾರಣಗಳು ಒಂದೇ ಆಗಿರುವುದರಿಂದ, ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಏಳು ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

11. ಈ ಮೇಲ್ಕಂಡ ಅಂಶಗಳ ಕುರಿತಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 15 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಗಾಯಾಳು ಸಾಕ್ಷಿದಾರರಾದ ಚಾಸಾ-4 ರಿಂದ 10 ರವರನ್ನು ಪ್ರಾಸಾ-2 ರಿಂದ 8 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2, 3, 11 ರಿಂದ 15 ರವರನ್ನು ಸಾಕ್ಷ್ಯದ

ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ಮತ್ತು 8 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

12. ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತನಗಾಗಲೀ, ಚಾಸಾ-4 ರಿಂದ 10 ರವರಿಗಾಗಲೀ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾನು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದಾಗ್ಯೂ ಕೂಡ, ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಅಂಶಗಳನ್ನು ಅಭಿಯೋಜನೆಗೆ ಪೂರಕವಾಗಿ ಪಡೆದಿರುವುದಿಲ್ಲ. ಸದರಿ ಸಾಕ್ಷಿಯು ಮುಂದುವರೆದು ತಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿದ್ದು ಹಾಗೂ ತಮ್ಮಗಳ ನಡುವೆ ಎದುರು ದೂರುಗಳು ದಾಖಲಾಗಿರುವ ಕಾರಣ, ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆಂದು ನುಡಿದಿರುತ್ತಾರೆ.

13. ಈ ಪ್ರಕರಣದ ಗಾಯಾಳು ಸಾಕ್ಷಿದಾರರಾದ ಚಾಸಾ-4 ರಿಂದ 10 ರವರನ್ನು ಪ್ರಾಸಾ-2 ರಿಂದ 8 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತಮಗಾಗಲೀ, ಚಾಸಾ-1 ರವರಿಗಾಗಲೀ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾವು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದಾಗ್ಯೂ ಕೂಡ, ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಅಂಶಗಳನ್ನು ಅಭಿಯೋಜನೆಗೆ ಪೂರಕವಾಗಿ ಪಡೆದಿರುವುದಿಲ್ಲ. ಸದರಿ ಸಾಕ್ಷಿದಾರರು ಮುಂದುವರೆದು

ತಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿದ್ದು ಹಾಗೂ ತಮ್ಮಗಳ ನಡುವೆ ಎದುರು ದೂರುಗಳು ದಾಖಲಾಗಿರುವ ಕಾರಣ, ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆಂದು ನುಡಿದಿರುತ್ತಾರೆ.

14. ಈ ಮೇಲ್ಕಂಡ ಅಭಿಯೋಜನೆಯ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಂತೆ ಪ್ರಾಸಾ-1 ರವರು ದಿನಾಂಕ 14.06.2023 ರಂದು ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು, ತಮಗೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿರುತ್ತಾರೆಂದು ನೀಡಿದ ಲಿಖಿತ ದೂರು ಆಗಿರುತ್ತದೆ. ನಿಪಿ-2 ರಿಂದ 8 ರಂತೆ ಪ್ರಾಸಾ-2 ರಿಂದ 8 ರವರು ದಿನಾಂಕ 16.06.2023 ರಂದು ನೀಡಿರುವ ಅಲ್ಲಗಳೆದ ಹೇಳಿಕೆಗಳನ್ನು ಹಾಜರುಪಡಿಸಿರುತ್ತಾರೆ.

15. ಈ ಮೇಲ್ಕಾಣಿಸಿದ ಸಾಕ್ಷಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ-1 ರವರು ಫಿರ್ಯಾದುದಾರರಾಗಿದ್ದು, ಪ್ರಾಸಾ-2 ರಿಂದ 8 ರವರು ಗಾಯಾಳು ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತಮಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ಪ್ರಾಸಾ-1 ರವರು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ಹಾಗೂ ಪ್ರಾಸಾ-2 ರಿಂದ 8 ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಈ ಅಂಶವನ್ನು ಗಮನಿಸಿದಾಗ, 1 ರಿಂದ 9 ನೇ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳು ಕೇವಲ ಆರೋಪಗಳಾಗಿ ಉಳಿದಿದೆಯೇ ವಿನಃ ಸದರಿ ಆರೋಪಣೆಗಳನ್ನು ಸಾಬೀತುಪಡಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಅಭಿಯೋಜನೆಯು 1 ರಿಂದ 9 ನೇ ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಕಂಡುಬರುತ್ತದೆ.

16. ಪ್ರಸ್ತುತ ಈ ಪ್ರಕರಣದಲ್ಲಿ 1 ರಿಂದ 9 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 143, 147, 504, 323, 324, 354(ಬಿ) ಮತ್ತು 506 ಸಹವಾಚಕ ಕಲಂ 149 ರ ಅಡಿಯಲ್ಲಿ ದೋಷಾರೋಪಣೆ ಪತ್ರವನ್ನು

ಸಲ್ಲಿಸಿರುತ್ತಾರೆ. ಸದರಿ ಮೇಲ್ಕಂಡ ಕಲಂಗಳನ್ನು ಪರಿಶೀಲಿಸಲಾಗಿ, ಭಾರತೀಯ ದಂಡ ಸಂಹಿತೆ ಕಲಂ 504, 323 ಮತ್ತು 506 ರ ಅಪರಾಧಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 320 ರ ಅಡಿಯಲ್ಲಿ ರಾಜಿಮಾಡಿಕೊಳ್ಳಬಹುದಾದ ಅಪರಾಧಗಳು ಎಂಬುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಅಂತೆಯೆ ಪ್ರಾಸಾ-1 ರಿಂದ 8 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಹಾಗೂ ಆರೋಪಿತರು ರಾಜಿಮಾಡಿಕೊಂಡಿರುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಹಾಗಾಗಿ ಉಭಯ ಪಕ್ಷಗಾರರ ನಡುವಣ ಸೌಹಾರ್ದಯುತ ಜೀವನಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವ ಕಾರಣ, ಅಭಿಯೋಜನೆ ಪರ ಸಾಕ್ಷ್ಯವನ್ನು ಅಂಗೀಕರಿಸ ಲಾಗುತ್ತದೆ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ.

17. ಈ ಮೇಲ್ಕಂಡಂತೆ ಪ್ರಾಸಾ-1 ರಿಂದ 8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲ ವೆಂದು, ಆರೋಪಿತರು ತಮಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ಪ್ರಾಸಾ-1 ರವರು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ಹಾಗೂ ಪ್ರಾಸಾ-2 ರಿಂದ 8 ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ, ಅಭಿಯೋಜನೆಯು 1 ರಿಂದ 9 ನೇ ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡುಬರುತ್ತದೆ. ಸದರಿ ಸಂಶಯದ ಲಾಭವನ್ನು ಮತ್ತು ಈ ಪ್ರಕರಣದ ಫಿರ್ಯಾದುದಾರರಾದ ಪ್ರಾಸಾ-1 ರವರು ಹಾಗೂ ಗಾಯಾಳು ಸಾಕ್ಷಿದಾರರಾದ ಪ್ರಾಸಾ-2 ರಿಂದ 8 ರವರು ಆರೋಪಿತರೊಂದಿಗೆ ರಾಜಿಮಾಡಿಕೊಂಡಿರುವುದನ್ನು ತಮ್ಮ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುವುದನ್ನು ಪರಿಗಣನೆಗೆ ತೆಗೆದುಕೊಂಡು, 1 ರಿಂದ 9 ನೇ ಆರೋಪಿತರು ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು, ಮೇಲ್ಕಾಣಿಸಿದ ಅಂಶ-1 ರಿಂದ 7 ನ್ನು ನಕಾರಾತ್ಮಕವೆಂದು ಉತ್ತರಿಸಿರುತ್ತೇನೆ.

**18. <u>ಅಂಶ-8:-</u>** ಈ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ, ಈ ಕೆಳಗಿನಂತೆ ಆದೇಶಿಸಿರುತ್ತೇನೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, 1 ರಿಂದ 9ನೇ ಆರೋಪಿತರನ್ನು ಅವರ ವಿರುದ್ಧ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ 143, 147, 504, 323, 324, 354(ಬಿ) ಮತ್ತು 506 ಸಹವಾಚಕ ಕಲಂ 149ರ ಆರೋಪಗಳಿಗಾಗಿ ನಿರಪರಾಧಿಗಳು ಎಂದು ನಿರ್ಣಯಿಸಲಾಗಿದೆ.

ಈ ಪ್ರಕರಣದಲ್ಲಿ 1 ರಿಂದ 9ನೇ ಆರೋಪಿತರು ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು, ಈ ತೀರ್ಪು ಉದ್ಘೋಷಿಸಿದ ದಿನದಿಂದ ಆರು ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

ಮಾಲುಪಟ್ಟಿ ಸಂಖ್ಯೆ-75/2023 ಮತ್ತು ಪಿ.ಆರ್. ಸಂಖ್ಯೆ-38/2026ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಂದು ಸುಮಾರು ಮೂರು ಅಡಿ ಉದ್ದದ ಒಳಹಿಡಿ ಗಾತ್ರದ ಕಾಡು ಜಾತಿ ಮರದ ಕೋಲು ಮತ್ತು ಒಂದು ಸುಮಾರು ಎರಡೂವರೆ ಅಡಿ ಉದ್ದದ ಒಳಹಿಡಿ ಗಾತ್ರದ ಕಾಡು ಜಾತಿ ಮರದ ಕಣೆಗೆ ಬೆಲೆಬಾಳದ ವಸ್ತುಗಳಾಗಿರುವುದರಿಂದ ಮೇಲ್ಮನವಿ ಅವಧಿಯ ನಂತರ ನಾಶಪಡಿಸಲು ಆದೇಶಿಸಿದ್ದೇನೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 6ನೇ ಏಪ್ರಿಲ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**<u>ಅನುಬಂಧ</u>**

**<u>ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:</u>**

| | | |
|---|---|---|
| ಪ್ರಾಸಾ-1 | : | ಕರಿಯಪ್ಪ |
| ಪ್ರಾಸಾ-2 | : | ಪ್ರಹ್ಲಾದ |
| ಪ್ರಾಸಾ-3 | : | ಶಿವಮೂರ್ತಪ್ಪ |
| ಪ್ರಾಸಾ-4 | : | ಶಿವಮ್ಮ |
| ಪ್ರಾಸಾ-5 | : | ಈರಮ್ಮ |
| ಪ್ರಾಸಾ-6 | : | ಮಹಾದೇವಪ್ಪ |
| ಪ್ರಾಸಾ-7 | : | ಗಟ್ಟೆಪ್ಪ |
| ಪ್ರಾಸಾ-8 | : | ಬಸವರಾಜಪ್ಪ |

**<u>ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:</u>**

| | | |
|---|---|---|
| ನಿಪಿ-1 | : | ಲಿಖಿತ ದೂರು |
| ನಿಪಿ-1(ಎ) | : | ಪ್ರಾಸಾ-1 ರವರ ಸಹಿ |
| ನಿಪಿ-2 ರಿಂದ 8 | : | ಪ್ರಾಸಾ-2 ರಿಂದ 8 ರವರ ಅಲ್ಲಗಳೆದ ಹೇಳಿಕೆಗಳು |

**<u>ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ</u>**:

- ಇಲ್ಲ -

**<u>ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:</u>**

- ಇಲ್ಲ -

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.